ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ,
6ನೇ ಮಹಡಿ, ಕಾವೇರಿ ಭವನ, ಕೆ.ಹೆಚ್.ಬಿ.ಕಾಂಪ್ಲೆಕ್ಸ್,
ಕೆ.ಜಿ.ರಸ್ತೆ, ಬೆಂಗಳೂರು- 560 009.

ಸಂಖ್ಯೆ:ಡಿಪಿಎನ್:ಕೇಂಸ:ವಿವ:101:2013-14, ದಿನಾಂಕ:01.07.2019

## ಅಧಿಸೂಚನೆ

ವಿಷಯ: ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿಯವರನ್ನು ಬದಲಾಯಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಅಧಿಸೂಚನೆ ಸಂಖ್ಯೆ:ಡಿಪಿಎನ್:ಕೇಂಸ:ವಿವ:101:2013-14, ದಿನಾಂಕ:02.07.2018.

*****

ಈ ಕಛೇರಿಯ ಉಲ್ಲೇಖಿತ ಅಧಿಸೂಚನೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005ರ 5ನೇ ಪ್ರಕರಣದ (1) ಮತ್ತು (2)ನೇ ಉಪ ಪ್ರಕರಣಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಮಾಹಿತಿ ಹಕ್ಕು ಅಧಿನಿಯಮ, 2005ರಡಿಯಲ್ಲಿ ಮಾಹಿತಿಗಾಗಿ ಕೋರಿಕೆ ಸಲ್ಲಿಸುವ ವ್ಯಕ್ತಿಗಳಿಗೆ ಮಾಹಿತಿ ಒದಗಿಸಲು ಶ್ರೀ ಎಸ್.ಎನ್.ಹಿರೇಮನಿ, ಅಭಿಯೋಗ ಉಪನಿರ್ದೇಶಕರು, ವ್ಯಾಜ್ಯ-2 ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿ, ಬೆಂಗಳೂರು, ಇವರನ್ನು ಈ ಕಛೇರಿಯ ಸಾರ್ವಜನಿಕ ಮಾಹಿತಿ ಅಧಿಕಾರಿ ಎಂದು ನೇಮಕ ಮಾಡಲಾಗಿತ್ತು. ಸರ್ಕಾರದ ಅಧಿಸೂಚನೆ ಸಂಖ್ಯೆ: ಒಇ 28 ಪಿಪಿಇ 2019, ದಿನಾಂಕ:29.06.2019ರಲ್ಲಿ ಸದರಿಯವರನ್ನು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಹುದ್ದೆಗೆ ಪ್ರಭಾರ ನೇಮಿಸಿರುವುದರಿಂದ ಹಾಗೂ ಸದರಿ ಅಧಿಕಾರಿಯವರು ಇಲಾಖೆಯ ನಿರ್ದೇಶಕರ ಹುದ್ದೆಯ ಪ್ರಭಾರ ವಹಿಸಿಕೊಂಡಿರುವುದರಿಂದ ಸದರಿಯವರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶಕರ ಕಛೇರಿಗೆ ಸಂಬಂಧಿಸಿದಂತೆ, ಪ್ರಥಮ ಮೇಲ್ಮನವಿ ಪ್ರಾಧಿಕಾರವಾಗುವುದರಿಂದ ಉಲ್ಲೇಖಿತ ಅಧಿಸೂಚನೆಯನ್ನು ರದ್ದುಪಡಿಸಲಾಗಿದೆ ಮತ್ತು ಮಾಹಿತಿ ಹಕ್ಕು ಅಧಿನಿಯಮ, 2005ರ 5ನೇ ಪ್ರಕರಣದ (1) ಮತ್ತು (2)ನೇ ಉಪ ಪ್ರಕರಣಗಳ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಪ್ರಶಾಂತ್ ಎಸ್ ತೋರಗಲ್, ಸರ್ಕಾರಿ ಅಭಿಯೋಜಕರು, 68ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ, ಬೆಂಗಳೂರು. ಇವರನ್ನು ಪ್ರಸ್ತುತ ನಿರ್ವಹಿಸುತ್ತಿರುವ ಕರ್ತವ್ಯದೊಂದಿಗೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರ ಕಛೇರಿಯ **"ಸಾರ್ವಜನಿಕ ಮಾಹಿತಿ ಅಧಿಕಾರಿ"** ಎಂದು ನಿಯುಕ್ತಿಗೊಳಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಲಾಗಿದೆ.

ಎಸ್.ಎನ್. 1/7/19
(ಎಸ್.ಎನ್.ಹಿರೇಮನಿ)
ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ
ನಿರ್ದೇಶಕರು(ಪ್ರ), ಬೆಂಗಳೂರು,
ದೂರವಾಣಿ:22213856.
1/7/19

ಇವರಿಗೆ,

ಶ್ರೀ ಪ್ರಶಾಂತ್ ಎಸ್ ತೋರಗಲ್, ಸರ್ಕಾರಿ ಅಭಿಯೋಜಕರು, 68ನೇ ಅಧಿಕ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ನಗರ, ಬೆಂಗಳೂರು

ಪ್ರತಿಯನ್ನು:

1. ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ ವಿಭಾಗ, ಸರ್ಕಾರಿ ಹೊರವಲಯ ಮುದ್ರಣಾಲಯ ಕೆಂಗೇರಿ, ಬೆಂಗಳೂರು ಇವರಿಗೆ ಕಳುಹಿಸಲಾಗಿದೆ. ಸದರಿ ಅಧಿಸೂಚನೆಯನ್ನು ಮುಂದಿನ ರಾಜ್ಯ ಪತ್ರಿಕೆ ಸಂಚಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ ಹಾಗೂ ಸದರಿ ಅಧಿಸೂಚನೆಯ 50 ಪ್ರತಿಗಳನ್ನು ಈ ಕಛೇರಿಗೆ ಕಳುಹಿಸಿಕೊಡಲು ವಿನಂತಿಸಲಾಗಿದೆ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.
3. ಮಾನ್ಯ ಮುಖ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ವಿಧಾನಸೌಧ ಕೊಠಡಿ ಸಂಖ್ಯೆ.302 ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
4. ಶ್ರೀ ಎಸ್.ಎನ್.ಹಿರೇಮನಿ, ಅಭಿಯೋಗ ಉಪನಿರ್ದೇಶಕರು, ವ್ಯಾಜ್ಯ-2 ಹಾಗೂ ನಿರ್ದೇಶಕರು ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ(ಪ್ರ), ಬೆಂಗಳೂರು, ಇವರಿಗೆ ಮಾಹಿತಿಗಾಗಿ.
5. ಮುಖ್ಯ ಕಛೇರಿಯ ಎಲ್ಲಾ ಅಭಿಯೋಗ ಉಪನಿರ್ದೇಶಕರು, ಇವರಿಗೆ ಮಾಹಿತಿಗಾಗಿ.
6. ರಾಜ್ಯದ ಎಲ್ಲಾ ವಲಯಗಳ ಕಾನೂನು ಅಧಿಕಾರಿ(ಹಿರಿಯ), ಇವರಿಗೆ ಮಾಹಿತಿಗಾಗಿ.
7. ಮುಖ್ಯ ಕಛೇರಿಯ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ಕಛೇರಿಯ ಸೂಚನಾ ಪಲಕಕ್ಕೆ.